ಮಹಾಭಾರತದಲ್ಲಿ ಒಂದು ಉಪಕಥೆಯಾಗಿದ್ದದ್ದು, ಕಾಲಾನುಕಾಲದಲ್ಲಿ ಅದು ಕರ್ನಾಟಕವೇ ಅಲ್ಲದೆ ದಕ್ಷಿಣ ಭಾರತದಲ್ಲೆಲ್ಲ ವೀರಭಕ್ತಿಯ ಪ್ರಸಿದ್ಧ ಕಥೆಯಾಗಿಬಿಟ್ಟಿತು. ಕರ್ನಾಟಕದಾದ್ಯಂತ ಮಲ್ಲಿಕಾರ್ಜುನನ ಶಿಲ್ಪ, ಗುಡಿಗಳು ಈಗಲೂ ಕಾಣಿಸುತ್ತವೆ. ಮಹಾಭಾರತ, ರಾಮಾಯಣದ ಕಥೆಗಳು ದೇಶಾದ್ಯಂತ ಹೇಗೆಲ್ಲಾ ವ್ಯಾಪಿಸಿಕೊಂಡಿವೆ ಎಂಬುದನ್ನು ಗಮನಿಸಿದರೆ ಅವು ಬುದ್ಧಿಗೂ, ಕೈಗೂ ನಿಲುಕದಂತಿವೆ.

ಶ್ರೀಶೈಲ ಮಲ್ಲಿಕಾರ್ಜುನನಿಗೆ ಅಸಂಖ್ಯಾತ ಭಕ್ತರಿದ್ದು, ಅದರಲ್ಲೂ ಸಾಧಕರೆನಿಸಿಕೊಳ್ಳಬೇಕಾದವರು ಅಲ್ಲಿಗೆ ಪ್ರಯಾಣ ಹೋಗಿ ತಮ್ಮ ಜೀವನವನ್ನು ಅಂತ್ಯಗೊಳಿಸುತ್ತಿದ್ದರು. ಅಕ್ಕನೂ ಅಂತೆಯೇ ತನ್ನ ಪ್ರೇಮ, ಭಕ್ತಿಯನ್ನು ಚೆನ್ನಮಲ್ಲಿಕಾರ್ಜುನನೆಡೆಗೆ ತಿರುಗಿಸಿ ಉಡುತಡಿಯಿಂದ ಶ್ರೀಶೈಲಕ್ಕೆ ವೀರಭಕ್ತಿಯ ಯಾತ್ರೆ ತೊಡಗಿದ್ದರಲ್ಲಿ ಆಶ್ಚರ್ಯವಿಲ್ಲ. ಆ ದಟ್ಟ ಅರಣ್ಯದ ನಡುವಣ ಆಕೆಯ ಪ್ರಯಾಣದ ಕಾಠಿಣ್ಯವನ್ನು ಮಾತ್ರ ಊಹಿಸುವುದು ಕಷ್ಟ. ಅವಳ ಕೆಲವು ವಚನಗಳ ಒಳ ಅರ್ಥವೂ ಅದನ್ನೇ ವಿವರಿಸುವಂತಿದೆ. ಇಲ್ಲಿ ಹೇಳಬೇಕಾದದ್ದು ಅಂದರೆ ಅಕ್ಕ ಕೃಷ್ಣಾ ನದಿ ತಟದ ಪೂರ್ವ ದಿಕ್ಕಿನ ಗುಹೆಯಲ್ಲಿ ಅಥವಾ ನೀಲಗಂಗಾ ಪ್ರದೇಶದ ಕದಳಿ ವನದಲ್ಲಿ ತನ್ನ ಜೀವನದ ಕೊನೆಯ ದಿನಗಳನ್ನು ಮಾತ್ರ ಕಳೆದಿರಬೇಕಷ್ಟೇ.

ಶ್ರೀಶೈಲ ಮಲ್ಲಿಕಾರ್ಜುನನ ಮುಖ್ಯ ಗುಡಿಯ ಹಿಂಭಾಗದ ಧ್ಯಾನ ಮಂಟಪಗಳು, ಈಗಲೂ ಅಲ್ಲಿ ಕಾಣುವ ತೊರೆ, ಸರೋವರದ ಸುಂದರ ಪ್ರಾಕೃತಿಕ ರಮ್ಯತೆಯ ನಡುವೆ ನಿರ್ಮಾಣವಾದವು. ಇದು ಎಲ್ಲ ಕಾಲದ ಸಂತರ ಧ್ಯಾನಗಮ್ಯ ಸ್ಥಳವಾಗಿರಬೇಕು. ಇತ್ತ ದಕ್ಷಿಣ ಕರ್ನಾಟಕದ ಘನ ನೀಲಿ ಮಂಟೇದಯ್ಯನೂ ತನ್ನ ಜೀವಿತಾಂತ್ಯದಲ್ಲಿ ಮಂಡ್ಯ ಜಿಲ್ಲೆಯ ಬೊಪ್ಪೇಗೌಡನಪುರದಲ್ಲಿ ಪಾತಾಳ ಗವಿ ಹೊಕ್ಕು ಜೀವ ಸಮಾಧಿಯಾದ ಕಥೆಯನ್ನು ಅವನ ಭಕ್ತರಾದ ನೀಲಗಾರರು ಹಾಡುತ್ತಾರೆ. ಘನ ನೀಲಿ, ನೀಲಗಾರ ಅಂದರೆ ಅದು ಯಾವ ನೀಲಿ? ಆಕಾಶದಾಚೆಯ ನೀಲಿಯೇ, ಸಮುದ್ರ ವ್ಯಾಪ್ತಿಯ, ಅದರ ಆಳದ ನೀಲಿ ಇರಬಹುದೇ? ಯಾವುದಕ್ಕೆ ಅಂತ್ಯವಿಲ್ಲವೋ ಅದರ ಬಣ್ಣ ನೀಲಿಯೇ, ನಿರ್ದಿಗಂತವೇ??

ಕೋಲಾರದ ಯೋಗಿ ನಾರಾಯಣ, ಚಿತ್ರದುರ್ಗದ ಅಂಕಳಿ ಮಠದಲ್ಲಿದ್ದಿರಬಹುದಾದವರು, ಕೊಳ್ಳೇಗಾಲದ ನಿಜಗುಣ ಶಿವಯೋಗಿ ಇವರೆಲ್ಲರ ಗುಹಾ ವಾಸದ ನೆಲೆಗಳು ಒಂದೇ ಮಾದರಿಯವಾಗಿದ್ದು ಅದನ್ನು 'ಹಿಡೆನ್ ಮಿಸ್ಟರಿ' ಎಂದು ವ್ಯಾಖ್ಯಾನಿಸಲಾಗಿದೆ. ಈ 'ಮಾತು ಮನಂಗಳಿಂದ ಅತ್ತತ್ತ ಮೀರಿದ ಸಾತಿಶಯದ' ಸಾಧನೆಯ ಅಂತಿಮ ಘಟ್ಟವನ್ನೇ ಅಕ್ಕ ಮಹಾದೇವಿ 'ಕೋಟಿ ರವಿ ಶಶಿಗಳಿಗೆ ಮೀಟಾದ ಪ್ರಭೆ' ಎಂದು ಕರೆದಿರಬಹುದೇ ? ಭಾರತದ ಮಹಾನ್ ಚಿಂತಕ, ಕಾವ್ಯ ಮೀಮಾಂಸಕ ಆಚಾರ್ಯ ಅಭಿನವ ಗುಪ್ತನೂ ಕೂಡ ತನ್ನ ಅಂತ್ಯದಲ್ಲಿ ಕಾಶ್ಮೀರದ ಗುಲ್ಮಾರ್ಗ್ ಕಣಿವೆಯ ಭೈರವನ ಗುಹೆ ಸೇರಿದ ಎಂಬ ಮಾಹಿತಿ ಇದೆ.

ಇತ್ತ ಇಲ್ಲಿ ನ್ಯೂಯಾರ್ಕ್ ಸ್ಟೇಟ್ ಮ್ಯೂಸಿಯಂನಲ್ಲಿನ ಕೃತಕ ಗುಹಾ ಮಾರ್ಗ ಮತ್ತು ಬೆಳಕಿನ ಸೃಷ್ಟಿಯ ಮಾದರಿ ಕರ್ನಾಟಕ ಅಥವಾ ಭಾರತದ ಎಲ್ಲೆಡೆ ತಾನೇ ತಾನಾಗಿ ಪ್ರಾಕೃತಿಕವಾಗಿದ್ದು, ಅಲ್ಲಿ ಅದೆಷ್ಟು ಜನ ಸಂತರು ಜ್ಞಾನ ಸಾಧನೆಗೈದು ಲೋಕಕ್ಕೆ ಹೇಳಬೇಕಾದದ್ದನ್ನು ಹೇಳಿ ತಮ್ಮ ಜೀವನವನ್ನು ಮುಡುಪಿದರೋ ಲೆಕ್ಕವಿಲ್ಲದಂತಿದೆ. ಮಹತೋಮಹೀಯವಾದದ್ದು, ಅಣೋರಣೀಯವಾದದ್ದು, ಅದು ಅಂತರಂಗಕ್ಕೆ ಮುಟ್ಟಿ ಹಾಗೆಯೇ ಅಂಗೈಯ ಮೇಲಿನ ಲಿಂಗ ರೂಪಿನ ಚುಳುಕಾದದ್ದು ಒಂದು ದಿಕ್ಕಿನ ಸಾಧನೆಯಾದರೆ; ಲೇಖನದ ಆರಂಭಕ್ಕೇ ಹೇಳಿದಂತೆ, ರಾಜ್ಯ ಸಾಧನೆಯ ಅಮಲಿನಲ್ಲಿ ಅದೇ ಅಂಗೈಯಲ್ಲಿ ಕತ್ತಿ ಹಿಡಿದು ರುಂಡ ಮುಂಡ ಬೇರೆ ಮಾಡಿದ ಕಥೆಗಳೂ ಭೂಮಿಯ ಮೇಲೆ ಅಸಂಖ್ಯಾತ !! ದೇಶ ದೇಶಗಳ ಯುದ್ಧೋನ್ಮಾದ ಈ ಹೊತ್ತಿಗೂ ನಿಂತೇ ಇಲ್ಲವಲ್ಲ. ಅದರ ಉದ್ದೇಶ, ತಂತ್ರಗಳು ಬೇರೆಬೇರೆಯಾಗಿ, ಯುದ್ಧದ ಮೂಲ ಭಾವ ಮಾತ್ರ ಒಂದೇ; ಅದು ನಾಯಕರೆನಿಸಿಕೊಂಡವರ ಪ್ರತಿಷ್ಠೆ, ಅಹಂಕಾರ. ಹಿಡಿದ ಕತ್ತಿಯೂ ಕಬ್ಬಿಣದ್ದೇ, ತಂಬೂರಿಯ ತಂತಿಯೂ ಕಬ್ಬಿಣದ್ದೇ! ಒಂದು ರುಂಡ ಮುಂಡ ಬೇರೆ ಮಾಡುವುದಾದರೆ, ಇನ್ನೊಂದು ಜೀವಗಳ ಅಂತರಂಗವನ್ನು ಸಾಧುಗೊಳಿಸುವಂಥದ್ದು.

* * *

ವಸ್ತು ಸಂಗ್ರಹಾಲಯದ ಹೊರಗೆ ಬಂದಾಗ ಪಶ್ಚಿಮದಲ್ಲಿ ಹೊತ್ತು ಇಳಿಯುತ್ತಿತ್ತು. ●